# ನಭಾ ಪ್ರಭಾವಳಿ!

**ನಭಾ ಪ್ರಭಾವಳಿ ಕನ್ನಡದಲ್ಲಿ ಬೆಳಗಿದ್ದಕ್ಕಿಂತ ತೆಲುಗಿನಲ್ಲಿ ಪ್ರಜ್ವಲಿಸಿದ್ದೇ ಹೆಚ್ಚು. ‘ವಜ್ರಕಾಯ’ ಸಿನಿಮಾ ಮೂಲಕ ಚಿತ್ರರಂಗಕ್ಕೆ ಬಂದ ಇವರು ಬಹುಬೇಗನೇ ತೆಲುಗಿಗೆ ಹಾರಿದರು. ಅಲ್ಲಿ ಗಟ್ಟಿಯಾಗಿ ನೆಲೆಯೂರುತ್ತಿರುವ ಈ ಹುಡುಗಿಗೆ ಕನ್ನಡದಲ್ಲಿಯೂ ಒಳ್ಳೆಯ ಪಾತ್ರಗಳ ಮೂಲಕ ಗುರ್ತಿಸಿಕೊಳ್ಳಬೇಕು ಎಂಬ ಹಂಬಲ ಇದೆ.**

**■ ಪದ್ಮನಾಭ ಭಟ್**



ತೆಲುಗು ಚಿತ್ರರಂಗದಲ್ಲೀಗ ಕನ್ನಡತಿಯರದ್ದೇ ದರ್ಬಾರು. ರಶ್ಮಿಕಾ ಮಂದಣ್ಣ ಮತ್ತು ಪೂಜಾ ಹೆಗ್ಡೆ ಜೊತೆಗೆ ಎದ್ದು ಕಾಣುತ್ತಿರುವ ಇನ್ನೊಂದು ಹೆಸರು ನಭಾ ನಟೇಶ್. ಕನ್ನಡದ ಈ ಹುಡುಗಿ ಸಿನಿಮಾಪ್ರಯಾಣ ಆರಂಭಿಸಿದ್ದೂ ಕನ್ನಡ ಸಿನಿಮಾದ ಮೂಲಕವೇ. ಆದರೆ ಬಹುಬೇಗ ತೆಲುಗುನೆಲ ಇವರನ್ನು ಕರೆಸಿಕೊಂಡಿತು. ಅಲ್ಲಿ ಒಂದೊಂದೇ ಮೆಟ್ಟಿಲುಗಳನ್ನು ಏರಿ ವೃತ್ತಿಜೀವನವನ್ನು ಕಟ್ಟಿಕೊಳ್ಳುತ್ತಿರುವ ಹುಡುಗಿ ನಭಾ.

ಸದ್ಯ ಅವರು ನಟಿಸಿರುವ ಎರಡು ತೆಲುಗು ಸಿನಿಮಾ ಬಿಡುಗಡೆಯಾಗಬೇಕಿದೆ. ‘ಸೋಲೊ ಬ್ರತುಕೆ ಸೋ ಬೆಟರ್’ ಸಿನಿಮಾದಲ್ಲಿ ಸಾಯಿ ಧರಮ್ ತೇಜ್ ಜೊತೆ ನಟಿಸುತ್ತಿದ್ದಾರೆ. ಮತ್ತೊಂದು ಸಿನಿಮಾ ‘ಅಲ್ಲುಡು ಅಧುರ್ಸ್’ನಲ್ಲಿ ಶ್ರೀನಿವಾಸ ಬೆಲ್ಲಮಕೊಂಡ ಜೊತೆಗೆ ತೆರೆ ಹಂಚಿಕೊಳ್ಳುತ್ತಿದ್ದಾರೆ.

“‘ಅಲ್ಲುಡು ಅಧುರ್ಸ್’ ಕಂಪ್ಲೀಟ್ ಮನರಂಜನೆಯ ಪ್ಯಾಕೇಜ್ ಕೊಡುವ ಸಿನಿಮಾ. ನನ್ನದು ಎಲ್ಲ ರೀತಿಯ ಛಾಯೆಗಳೂ ಇರುವ ಪಾತ್ರ. ‘ಸೋಲೊ ಬ್ರತುಕೆ ಸೊ ಬೆಟರ್ ಪಾತ್ರದ ಬಗ್ಗೆ ಈಗಲೇ ಸುಳಿವು ಕೊಡಲಾರೆ. ಆದರೆ ತುಂಬ ಯೂನಿಕ್ ಪಾತ್ರ ಎಂದಷ್ಟೇ ಹೇಳಬಲ್ಲೆ” ಎನ್ನುತ್ತಾರೆ ಅವರು. ಈ ಎರಡೂ ಚಿತ್ರಗಳು ಮೇ ತಿಂಗಳಲ್ಲೇ ಬಿಡುಗಡೆಯಾಗಬೇಕಿದ್ದವಂತೆ. ಆದರೆ ಲಾಕ್‌ಡೌನ್ ಕಾರಣಕ್ಕೆ ಮುಂದೆ ಹೋಗಿವೆ.

ಕೊರೊನಾ ಕಾಲದಲ್ಲಿ ಒಟಿಟಿ ಫ್ಲಾಟ್‌ಫಾರಂಗಳು ಮುನ್ನೆಲೆಗೆ ಬಂದಿವೆಯಾದರೂ ಜನರು ಚಿತ್ರಮಂದಿರಗಳನ್ನು ತಿರಸ್ಕರಿಸುವುದಿಲ್ಲ ಎಂದು ದೃಢವಾಗಿ ಹೇಳುತ್ತಾರೆ ನಭಾ. ಅದಕ್ಕೆ ಅವರು ಕಾರಣವನ್ನೂ ನೀಡುತ್ತಾರೆ.

‘ಸಿನಿಮಾ ನೋಡುವುದು ಒಂದು ಕರ್ತವ್ಯ ಅಲ್ಲ. ಅದೊಂದು ವಿಶಿಷ್ಟವಾದ ಅನುಭವ. ನೆಚ್ಚಿನ ನಟರ ಸಿನಿಮಾಗಾಗಿ ಕಾಯುವುದು, ಬಿಡುಗಡೆಯಾದಾಗ ಮನೆಯವರೆಲ್ಲ ಹೋಗಿ ಕ್ಯೂನಲ್ಲಿ ನಿಂತು ಟಿಕೆಟ್ ತೆಗೆದುಕೊಳ್ಳುವುದು, ಸರಿಯಾದ ಸೀಟ್ ಹುಡುಕಿ ಕುಳಿತುಕೊಳ್ಳುವುದು, ಕತ್ತಲ ಚಿತ್ರಮಂದಿರದಲ್ಲಿ ದೊಡ್ಡ ಪರದೆಯ ಮೇಲೆ ಸಾಮೂಹಿಕವಾಗಿ ಸಿನಿಮಾ ನೋಡುವುದು, ಅದಕ್ಕೆ ಪ್ರತಿಕ್ರಿಯಿಸುವುದು ಎಲ್ಲವೂ ಸೇರಿದ ಅನುಭವ ಅದು. ಆ ಅನುಭವ ಲ್ಯಾಪ್‌ಟಾಪ್, ಮೊಬೈಲ್‌ನಲ್ಲಿ ಸಿಗುತ್ತದೆಯೇ?’ ಎಂದು ಪ್ರಶ್ನಿಸುತ್ತಾರೆ. ‘ಲ್ಯಾಪ್‌ಟಾಪ್‌ನಲ್ಲಿ ಸಿನಿಮಾ ನೋಡುವುದು ತುಂಬ ಹೊಸ ವಿಷಯವೇನಲ್ಲ. ವರ್ಷಗಳಿಂದ ಆ ಸೌಲಭ್ಯ ಇದ್ದೇ ಇದೆ. ಆದರೆ ಅದು ಎಂದಿಗೂ ಜನರು ಚಿತ್ರಮಂದಿರಗಳಿಗೆ ಬರದಂತೆ ತಡೆಯುವಷ್ಟು ಶಕ್ತಿಶಾಲಿಯಾಗಿಲ್ಲ’ ಎನ್ನುವುದು ಅವರ ಪ್ರತಿಪಾದನೆ.

ನಟನೆಯ ಗೀಳು ಅಂಟಿಸಿಕೊಂಡವರಿಗೆ ಕ್ಯಾಮೆರಾ ವಿರಹವನ್ನು ಸಹಿಸಿಕೊಳ್ಳುವುದು ಕಷ್ಟವೇ ಸೈ. ಆದರೆ ನಭಾ ವಿಷಯದಲ್ಲಿ ಹೀಗಾಗಿಲ್ಲ. ಲಾಕ್‌ಡೌನ್ ಸಮಯ ಅವರ ಪಾಲಿಗೆ ರಜಾದಿನವಾಗಿ ದಕ್ಕಿದೆ.

‘ನಾನು ಯಾವಾಗಲೂ ನಟನೆಯಲ್ಲಿಯೇ ತೊಡಗಿಕೊಳ್ಳುವಷ್ಟು ಬ್ಯುಸಿ ನಟಿಯಲ್ಲ. ಶೂಟಿಂಗ್ ನಡುವೆ ಬ್ರೇಕ್ ಸಿಗುತ್ತಲೇ ಇರುತ್ತದೆ. ಆದರೆ ಲಾಕ್‌ಡೌನ್‌ಗಿಂತ ಮೊದಲಿನ ಕೆಲವು ತಿಂಗಳಲ್ಲಿ ಎರಡು ಸಿನಿಮಾಗಳಲ್ಲಿ ಒಟ್ಟಿಗೆ ನಟಿಸುತ್ತಿದ್ದುದರಿಂದ ಬ್ಯುಸಿಯಾಗಿಬಿಟ್ಟಿದ್ದೆ. ಹಾಗಾಗಿ ಭಾನುವಾರವೂ ಶೂಟಿಂಗ್‌ಗೆ ಹೋಗಬೇಕಾಗುತ್ತಿತ್ತು. ಆದ್ದರಿಂದ ಕೊರೊನಾದಿಂದ ಲಾಕ್‌ಡೌನ್ ಆದಾಗ ಮನೆಯಲ್ಲಿ ಸಮಯ ಕಳೆಯಲು ಸಾಧ್ಯವಾಯ್ತು. ಕುಟುಂಬದವರೊಂದಿಗೆ ರಜಾ ದಿನಗಳನ್ನು ಮಜಾ ಮಾಡಿಕೊಂಡು ಕಳೆದೆ’ ಎಂದು ಹೇಳಿಕೊಂಡರೂ ಅವರು ಶೂಟಿಂಗ್ ಅನ್ನು ಮಿಸ್ ಮಾಡಿಕೊಳ್ಳದೆ ಇಲ್ಲ.

‘ಇದು ನಾನು ಇಷ್ಟಪಟ್ಟು ಬಂದಿರುವ ವೃತ್ತಿ. ಹಾಗಾಗಿ ಸೆಟ್‌ಗೆ ಹೋಗುವುದನ್ನು, ಚಿತ್ರೀಕರಣದಲ್ಲಿ ಪಾಲ್ಗೊಳ್ಳುವುದನ್ನು ಮಿಸ್ ಮಾಡಿಕೊಳ್ಳುತ್ತಿದ್ದೇನೆ. ಆದರೆ ಅದಷ್ಟೇ ಸಿನಿಮಾ ಎಂದು ನಾನು ಯಾವತ್ತೂ ಅಂದುಕೊಂಡಿಲ್ಲ. ಕಲಾವಿದರ ಪಾಲಿಗೆ ಸಿನಿಮಾ ಅನ್ನುವುದು ಎಕ್ಸಾಮ್ ಇದ್ದ ಹಾಗೆ. ಇಡೀ ವರ್ಷ ಆರಾಮವಾಗಿದ್ದುಕೊಂಡು ಎಕ್ಸಾಮ್ ಬರೆದರೆ ಪಾಸಾಗಲು ಸಾಧ್ಯವೇ? ಅದಕ್ಕೆ ಮುನ್ನ ಸಾಕಷ್ಟು ಸಿದ್ಧತೆ ಮಾಡಿಕೊಳ್ಳಬೇಕಲ್ಲವೇ? ಹೋಮ್‌ವರ್ಕ್ ಕೂಡ ಒಬ್ಬ ಕಲಾವಿದೆಗೆ ಅತೀ ಅಗತ್ಯ ಎಂದು ನಂಬಿದವಳು ನಾನು. ಹೀಗಾಗಿ ಬಿಡುವಿನ ವೇಳೆಯಲ್ಲಿಯೂ ನಾನು ಸಿನಿಮಾದ